(ಈ) ತಾಲ್ಲೂಕದಲ್ಲಿ ಮಂಜೂರ ಗ್ರಾಮವು ತಪ್ಪತ್ತ ಗುಡ್ಡದ ಒರೆಯಲ್ಲಿದ್ದು ನೀರಾವರಿ ದೊಡ್ಡ ಕೆರೆ ಇದೆ. ಹುಲ್ಲು ಸಮೃದ್ಧಿ ಇದೆ ಅಲ್ಲಿ ಒಂದು ಕುರಿ ಫಾರಂ ಸರ್ಕಾರದವರು ಮಂಜೂರು ಮಾಡುವರೇ;

(ಉ) ಫಾರಂ ಮಾಡಿದಲ್ಲಿ ಉತ್ತಮತಳದ ಕುರಿಗಳಂ ಟಗರುಗಳನ್ನು ತಂದು ಸ್ಥಾನಿಕ ಕುರಿ ಗಳಿಗೆ ಕಸಿಮಾಡಿ ಕುರಿ ತಳಿ ಬೆಳೆಸುವುದಕ್ಕೆ ಸಾಧ್ಯಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ ?

ಶ್ರೀ ಎನ್. ಚಿಕ್ಕೇಗೌಡ (ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು).—

(ಅ) ಸುಮಾರು ೨೦೦

(ಆ) ತಳಿ ರುಧಾರಣೆಯ ವಿಷಯವನ್ನು ಸರ್ಕಾರವು ತೀವ್ರವಾಗಿ ಪರಿಶೀಲಿಸುವುದು.

(ಇ) ತೀವ್ರವಾಗಿ ಪರಿಶೀಲಿಸುವುದು.

(ಈ) ಪರಿಶೀಲನೆಯಲ್ಲಿದೆ

(ಉ) ಈ ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ವಿ. ವಿ. ವಾಯಿ.—ಶಿರಹಟ್ಟಿ ತಾಲ್ಲೂಕಿನಲ್ಲಿ ಕುರುಬರ ಸಂಖ್ಯೆ ೨೦೦ ಎಂದು ಹೇಳಿದ್ದೀರಿ, ಅಲ್ಲಿ ೮-೧೦ ಸಾವಿರಕ್ಕಿಂತಲೂ ಹೆಚ್ಚಿ ಕುರಿಗಳು ಇವೆ. ಆ ಕುರುಬರು ಕೇವಲ ಕುರಿಗಳಿಂದಲೇ ಜೀವನ ಮಾಡುತ್ತಿದ್ದಾರೆ. ಅವರು ಕುರಿಯ ಉಣ್ಣೆಯಿಂದ ಕಂಬಳಿ ತಯಾರಂ ಮಾಡುತ್ತಾರೆ. ಅವರಲ್ಲಿ ಎಲ್ಲಾ ರೀತಿಯ ಕುರಿಗಳಿದ್ದರೂ ಕೂಡ ಉಣ್ಣೆಯ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಆಗಿಲ್ಲ. ಆದ್ದರಿಂದ ಅಲ್ಲಿ ಒಳ್ಳೆಯ ತಳಿಗಳನ್ನು ಸುಧಾರಿಸುವ ದೃಷ್ಟಿಯಿಂದಲೂ ಉಣ್ಣೆಯ ಅಭಿವೃದ್ಧಿಯ ದೃಷ್ಟಿಯಿಂದಲೂ ಅಲ್ಲಿನ ಕುರುಬರಿಗೆ ಟಗರುಗಳನ್ನು ಕೊಡುವ ಬಗ್ಗೆ ವಿಚಾರ ಮಾಡುತ್ತೀರಾ ?

† ಎನ್. ಚಿಕ್ಕೇಗೌಡ.—ಶಿರಹಟ್ಟಿ ತಾಲ್ಲೂಕಿನಲ್ಲಿ ಕುರಿಗಳ ಸಂಖ್ಯೆ ೧೮೫೦೦ ಇದೆ. ಆದ್ದರಿಂದ ಶಿರಹಟ್ಟಿ ತಾಲ್ಲೂಕಿನಲ್ಲಿರುವ ಮಂಜೂರ ಗ್ರಾಮದಲ್ಲಿ ಮತ್ತೊಂದು ಕುರಿ ಫಾರಂ ಸ್ಥಾಪನೆ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ ಗದಗ ಹತ್ತಿರ ಷಿಪ್ ವುಲ್ ಡೆವಲ್ಪ ಮೆಂಟ್ ಸ್ಕೀಮ್, ಮತ್ತು ರಾಣೆ ಬೆನ್ನೂರಿನಲ್ಲಿ ಒಂದು ಷಿಪ್ ಡೆವಲಪ ಮೆಂಟ್ ಸ್ಕೀಮ್ ಪ್ರಾರಂಭ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಶಿರಹಟ್ಟಿ ತಾಲ್ಲೂಕಿನಲ್ಲಿ ಕುರಿ ಉಣ್ಣೆ ಅಭಿವೃದ್ಧಿ ಕೇಂದ್ರವನ್ನು ಸ್ಥಾಪನೆ ಮಾಡತಕ್ಕದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಉಣ್ಣೆ ಪರೀಕ್ಷೆ, ಮಾಂಸಪನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರವಾಗಿ ಕುರಿ ತಳಿಗಳನ್ನು ಅಭಿವೃದ್ಧಿ ಮಾಡಿ ಕ್ರಾಸ್ ಬ್ರೀಡಿಂಗ್ ಪ್ರೋಗ್ರಾವ್ ಮುಖಾಂತರ ಉಣ್ಣೆ ಮತ್ತು ಮಾಂಸದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ವಿ ವಾಯಿ.—ಅಲ್ಲಿ ಒಂದು ಕುರಿ ಫಾರಂ ಸ್ಥಾಪನೆ ಮಾಡಬೇಕು ಎಂದು ಅಲ್ಲಿಯ ಜನರ ಅಪೇಕ್ಷೆ ಇದೆ, ಸರ್ಕಾರದವರು ಇದನ್ನು ಮಾಡುತ್ತಾರೆಯೇ ?

ಶ್ರೀ ಎನ್. ಚಿಕ್ಕೇಗೌಡ.—ರಾಣೆಬೆನ್ನೂರಿಗೆ ೧೮ ಮೈಲಿ ದೂರದಲ್ಲಿ ಒಂದು ಕುರಿ ಫಾರಂ ಇದೆ. ಬರೀ ಕುರಿ ಫಾರಂ ಸ್ಥಾಪನೆ ಮಾಡುವುದರಿಂದಲೇ ಕುರಿ ಅಭಿವೃದ್ಧಿಯಾಗುವುದಿಲ್ಲ. ಕುರಿ ತಳಿ ಅಭಿವೃದ್ಧಿ ಮಾಡಬೇಕಾದರೆ ಉಣ್ಣೆ ಮತ್ತು ಮಾಂಸ, ಅದಕ್ಕೆ ಬೇಕಾದಂಥ ಟಗರಿನ ವಿಸ್ತರಣಾ ಕೆಲಸದ ಮೂಲಕ ತಜ್ಞರು ಪ್ರತಿಯೊಂದೂ ಊರಿಗೂ ಹೋಗಿ ಟಗರುಗಳ ಮೂಲಕ ಕುರಿ ತಳಿ ಅಭಿವೃದ್ಧಿ ಮಾಡಬೇಕು. ಈಗ ಕುರಿ ತಳಿ ಅಭಿವೃದ್ಧಿ ಮಾಡುವುದಕ್ಕೆ ಟಗರೇ ಬೇಕಾಗಿಲ್ಲ. ರಷ್ಯಾ, ಆಸ್ಟ್ರೇಲಿಯಂ ಬಿಟ್ಟರೆ ಇಡೀ ಭರತ ಖಂಡದಲ್ಲಿ ಅದ್ಭುತವಾದ ಸಮ್ಮ ಕರ್ನಾಟಕದಲ್ಲಿ ಘನೀಕೃತ ವೀರ್ಯವನ್ನು ತಯಾರು ಮಾಡತಕ್ಕಂಥ ಕಾರ್ಯವನ್ನು ಈಗಾಗಲೇ ಚಳ್ಳಕೆರೆಯಲ್ಲಿ ಪ್ರಾರಂಭ ಮಾಡಿದ್ದೇವೆ. ಆ ಕೆಲಸವನ್ನು ಕರ್ನಾಟಕದಲ್ಲಿ ಕುರಿ ಅಭಿವೃದ್ಧಿಗೋಸ್ಕರ ವಿಸ್ತರಿಸಬೇಕು ಎನ್ನುವುದು ಸರ್ಕಾರ ಪರಿಶೀಲನೆಯಲ್ಲಿದೆ.

ಶಿರಹಟ್ಟಿ ತಾಲೂಕಿನಲ್ಲಿ ವಡವಿಕೆರೆ ಹಾಗೂ ಕಲ್ಲನೂರು ತುಂಗಭದ್ರಾ ಏತ ನೀರಾವರಿ ಯೋಜನೆಯ ಕಾಮಗಾರಿಗಳು

೭೫೪. ಶ್ರೀ ವಿ. ವಿ. ವಾಯಿ (ಶಿರಹಟ್ಟಿ).—ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯ ಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಶಿರಹಟ್ಟಿ ತಾಲೂಕಿನಲ್ಲಿ ಈ ವರ್ಷ ವಿಪರೀತ ಮಳೆಯಿಂದಾಗಿ ಬೆಳೆಗೇಡಾಗಿದ್ದು ಸರಕಾರಕ್ಕೆ ವಿದಿತವಾಗಿದೆಯೇ;

(ಆ) ಬರಗಾಲದ ಭಾಗದ ಪ್ರದೇಶದಲ್ಲಿದ್ದ ವಡವಿ ಕೆರೆಯು ಹೂಡಸಾರಿ ಬಜೆಟ್‌ದಲ್ಲಿ ಬಂದಿದ್ದರೂ ಸಹ ಪ್ರಾರಂಭವಾಗದಿದ್ದುದರ ಕಾರಣವೇನು,

(ಇ) ಈ ವರ್ಷವಾದರೂ ಸದರಿ ಕೆರೆಯನ್ನು ಬರಗಾಲವಿದ್ದುದರಿಂದ ರೈತ ಕೂಲಿಕಾರ ಜನರಿಗೆ ಕೆಲಸವಿಲ್ಲ, ಪ್ರಾರಂಭ ಮಾಡಿದಲ್ಲಿ ಕೆಲಸ ಸಿಕ್ಕುವುದರಿಂದ ಕಷ್ಟ ಪರಿಹಾರವಾಗುವುದು ಸರ್ಕಾರಕ್ಕೆ ತಿಳಿದಿದೆಯೇ ? ಈ ವರ್ಷ ಪ್ರಾರಂಭಿಸುವ ವಿಚಾರ ಇದೆಯೇ,

(ಈ) ಇದರಂತೆಯೇ ಅಭಾವ ಪ್ರದೇಶದಲ್ಲಿದ್ದ ಕಲ್ಲಸೂರು ತುಂಗಭದ್ರಾ ಲಿಫ್ಟ್ ಇರಿಗೇಷನ್ ಸಹ ಬಜೆಟಿನಲ್ಲಿ ಹೋದ ವರ್ಷ ಬಂದಿದ್ದು ಪ್ರಾರಂಭಿಸಲಿಲ್ಲವಾಗಿ ಈ ವರ್ಷ ಪ್ರಾರಂಭ ಮಾಡಲುವುದಕ್ಕೆ ಸರ್ಕಾರದವರು ಆದೇಶ ನೀಡುವರೇ,

(ಉ) ವಡವಿ ಕೆರೆ ಮತ್ತು ಕಲ್ಲಾನೂರು ಲಿಫ್ಟ್ ಇರಿಗೇಷನ್ ಕೂಡಿ ಎಷ್ಟು ಎಕರೆ ನೀರಾವರಿ ಆಗವುದು ?

ಶ್ರೀ ಎಸ್. ಬಿ. ನಾಗರಾಳ್ (ಸಣ್ಣ ನೀರಾವರಿ ರಾಜ್ಯಮಂತ್ರಿಗಳು).—

(ಅ) ಹೌದು.

(ಆ) ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ದೊರಕಿಲ್ಲ.

(ಇ) ಹಣದ ಸೌಲಭ್ಯವನ್ನು ನೋಡಿಕೊಂಡು ಆದ್ಯತೆಯ ಪ್ರಕಾರ ಮುಂದಿನ ಕ್ರಮ ಕೈಕೊಳ್ಳಲಾಗುವುದು.

(ಈ) ಕೆಲಸ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

(ಉ) ಸುಮಾರು ೯೩೬ ಎಕರೆಗಳು.

ಶ್ರೀ ವಿ. ವಿ. ವಾಯು.—ನಾನು ಈ ಪ್ರಶ್ನೆಯನ್ನು ಹಾಕುವ ಮೊದಲು ಕಲ್ಲನೂರು ತುಂಗಭದ್ರಾ ಲಿಫ್ಟ್ ಇರಿಗೇಷನ್ ಸ್ಕೀಂನ್ ಆಗಿರಲಿಲ್ಲ. ಈಗ ಸ್ಕೀಂಕ್ಷನ್ ಆಗಿದೆ, ಈ ಕೆಲಸವನ್ನು ಮಾಡಿರುವುದಕ್ಕಾಗಿ ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ವಡವಿಕೆರೆ ಕೆಲಸವನ್ನು ಇನ್ನೂ ತೆಗೆದುಕೊಂಡಿಲ್ಲ. ಅದಕ್ಕೆ ಹೆಚ್ಚಿನ ಹಣವನ್ನು ಮಂಜೂರು ಮಾಡುತ್ತೀರಾ ?

† ಶ್ರೀ ಎಸ್. ಬಿ. ನಾಗರಾಳ್.—ಕಲ್ಲನೂರು ಲಿಫ್ಟ್ ಇರಿಗೇಷನ್‌ಗೆ ಮುಂಜೂರಾತಿಯನ್ನು ಕೊಟ್ಟಿದೆ. ಕೆಲಸ ಬೇಗ ಶುರುವಾಡುವುದಕ್ಕೆ ಏನು ತೊಂದರೆ ಇದೆ ಎನ್ನುವುದನ್ನು ಪರಿಶೀಲನೆ ಮಾಡಿ ಕೆಲಸ ಬೇಗ ಶುರುವಾಗುವಂತೆ ಮಾಡುತ್ತೇವೆ. ವಡವಿಕೆರೆಗೆ ಹೊಸ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಲ್ಲ. ಅದರ ಬಗ್ಗೆ ಪರಿಶೀಲನೆಮಾಡಿ ಸೂಕ್ತವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. 668 ತಡೆಹಿಡಿಯಲಾಗಿದೆ. ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY
(but not taken up)

R. T. Office, Belgaum

770. SRI A. A. DESAI (Athani).—Will the Minister for Transport and Tourism be pleased to state —

(*a*) the number of Motar Vehicles registered in the R. T. Office, Belgaum as on 31st December 1975 ;

(*b*) the number of employees working in R T. Office, Belgaum as on 31st December 1975 ?